॥ ಜ್ಞಾನಾದೇವ ತು ಕೈವಲ್ಯಮ್ ॥

ವೇದಾಂತಭಾರತೀ

(ತುಮಕೂರು ವಿಶ್ವವಿದ್ಯಾನಿಲಯದಿಂದ ಮಾನಿತ ಸಂಶೋಧನ ಸಂಸ್ಥೆ)

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ – 571 602 ಮೈಸೂರು ಜಿಲ್ಲೆ

# ಶಿವೋಽಹಮ್

## ॥ ಗುರ್ವಷ್ಟಕಮ್ ॥

ಪ್ರತಿಯೊಬ್ಬ ಮನುಷ್ಯನ ಪರಮೋದ್ದೇಶ ಶಾಶ್ವತವಾದ ಆನಂದವನ್ನು ಹೊಂದುವುದು. ತನ್ನ ಈ ಉದ್ದೇಶವನ್ನು ಪೂರೈಸಿಕೊಳ್ಳಲು ಮನುಷ್ಯನಾದವನು ಪ್ರತಿದಿನ ಹಲವಾರು ಮಾರ್ಗಗಳಲ್ಲಿ ತಡಕಾಡುತ್ತಿರುತ್ತಾನೆ. ವಿದ್ಯೆಯಿಂದ, ಸಂಪತ್ತಿನಿಂದ, ಕೀರ್ತಿಯಿಂದ ಅಥವಾ ಇನ್ನಾವುದೇ ರೀತಿಯಲ್ಲಿ ಪರಮಸುಖವನ್ನು ಹೊಂದಬಹುದೆಂದು ಭಾವಿಸುತ್ತಾನೆ. ಆದರೆ ಆತ್ಮಜ್ಞಾನವನ್ನು ಪಡೆದು ಸಂಸಾರದಿಂದ ಬಿಡುಗಡೆಯನ್ನು ಹೊಂದುವುದೇ ನಿಜವಾದ ಆನಂದಕ್ಕೆ ಕಾರಣ. ಇದು ಕೇವಲ ಶಾಸ್ತ್ರಗಳ ಅಧ್ಯಯನದಿಂದ ಅಥವಾ ಕೀರ್ತಿಯಿಂದ ಲಭಿಸುವುದಿಲ್ಲ. ಸದ್ಗುರುವಿನ ಅನುಗ್ರಹದಿಂದ ಮಾತ್ರ ಇದು ಸಾಧ್ಯ ಎಂಬುದನ್ನು ಶ್ರೀಶಂಕರಭಗವತ್ಪಾದರು ಈ ಸ್ತೋತ್ರದಲ್ಲಿ ಉಪದೇಶಿಸಿದ್ದಾರೆ.

**ಶರೀರಂ ಸುರೂಪಂ ತಥಾ ವಾ ಕಲತ್ರಂ**
**ಯಶಶ್ಚಾರು ಚಿತ್ರಂ ಧನಂ ಮೇರುತುಲ್ಯಮ್ ।**
**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**
**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥1॥**

ಸುಂದರವಾದ ಶರೀರ, ಮನೋನುಕೂಲಳಾದ ಪತ್ನಿ, ಅಪಾರ ಕೀರ್ತಿ–ಸಂಮಾನಗಳು, ಮೇರುಪರ್ವತಕ್ಕೆ ಸಮಾನವಾದ ಸಂಪತ್ತು ಇದ್ದರೂ ಮನುಷ್ಯನಿಗೆ ಗುರುಚರಣಗಳಲ್ಲಿ ಭಕ್ತಿ–ಶ್ರದ್ಧೆಗಳು ಇಲ್ಲದಿದ್ದರೆ ಎಲ್ಲವೂ ವ್ಯರ್ಥವೇ ಸರಿ. ಅವನು ಸಂಸಾರದಿಂದ ಬಿಡುಗಡೆಯನ್ನು ಹೊಂದಲಾರ.

**ಕಲತ್ರಂ ಧನಂ ಪುತ್ರಪೌತ್ರಾದಿ ಸರ್ವಂ**
**ಗೃಹಂ ಬಾಂಧವಾಃ ಸರ್ವಮೇತದ್ಧಿ ಜಾತಮ್ ।**
**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**
**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥2॥**

ಮಾನವನಿಗೆ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಮನೆ, ಬಂಧುಬಳಗ ಎಲ್ಲವೂ ಇದ್ದು ಸುಖಮಯ ಸಂಸಾರವನ್ನು ನಡೆಸಲು ಅಪಾರಸಂಪತ್ತನ್ನು ಸಹ ಕೂಡಿಹಾಕಿದ್ದರೂ ಗುರುವಿನ ಚರಣಗಳಲ್ಲಿ ಭಕ್ತಿಶ್ರದ್ಧೆ ಇಲ್ಲದವನಿಗೆ ಜೀವನದಲ್ಲಿ ನಿಜವಾದ ಸುಖ ಸಿಗಲಾರದು.

**ಷಡಂಗಾದಿವೇದೋ ಮುಖೇ ಶಾಸ್ತ್ರವಿದ್ಯಾ**

**ಕವಿತ್ವಾದಿ ಗದ್ಯಂ ಸುಪದ್ಯಂ ಕರೋತಿ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥3॥**

ಋಗ್ವೇದಾದಿ ನಾಲ್ಕು ವೇದಗಳನ್ನು, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಮುಂತಾದ ಆರು ವೇದಾಂಗಗಳನ್ನು, ಎಲ್ಲ ಪುರಾಣ ಇತಿಹಾಸಗಳನ್ನು ಕಂಠಸ್ಥಮಾಡಿಕೊಂಡು ಮಹಾಪಂಡಿತನೆನಿಸಿ, ಗದ್ಯಪದ್ಯರೂಪದ ಉತ್ತಮ ಕಾವ್ಯಗಳನ್ನು ರಚಿಸುವ ಸಾಮರ್ಥ್ಯವನ್ನು ಹೊಂದಿದ್ದರೂ, ಸದ್ಗುರುವಿನ ಚರಣಗಳಲ್ಲಿ ನಿಷ್ಠೆಯನ್ನು ಇಡದಿದ್ದರೆ ಅವನ ಪಾಂಡಿತ್ಯ ವ್ಯರ್ಥವೇ ಸರಿ. ಅವನು ಭವಬಂಧನದಿಂದ ಮುಕ್ತಿಯನ್ನು ಹೊಂದಲಾರ.

**ವಿದೇಶೇಷು ಮಾನ್ಯಃ ಸ್ವದೇಶೇಷು ಧನ್ಯಃ**

**ಸದಾಚಾರವೃತ್ತೇಷು ಮತ್ತೋ ನ ಚಾನ್ಯಃ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥4॥**

ವಿದೇಶಗಳಲ್ಲಿ ಮಾನ-ಸಮ್ಮಾನಗಳನ್ನು ಪಡೆದು ಪ್ರಶಂಸೆಗೆ ಪಾತ್ರನಾಗಿ ಸ್ವದೇಶದಲ್ಲಿ ಧನ್ಯತೆಯನ್ನು ಹೊಂದಿ, ಸ್ನಾನ-ಶೌಚಾದಿ ಆಚಾರಗಳನ್ನು ಪಾಲಿಸುತ್ತಿದ್ದರೂ ಒಳ್ಳೆಯ ನಡತೆಯುಳ್ಳವನಾಗಿದ್ದರೂ, ಬೇರೆಲ್ಲರಿಗಿಂತ ಶ್ರೇಷ್ಠ-ವ್ಯಕ್ತಿಯಾಗಿದ್ದರೂ ಸಹ ಗುರುಚರಣಗಳಲ್ಲಿ ಭಕ್ತಿ ಇಲ್ಲದವನ ಜೀವನ ನಿರರ್ಥಕ.

**ಕ್ಷಮಾಮಂಡಲೇ ಭೂಪಭೂಪಾಲಬೃಂದೈಃ**

**ಸದಾ ಸೇವಿತಂ ಯಸ್ಯ ಪಾದಾರವಿಂದಮ್ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥5॥**

ವಿಸ್ತಾರವಾದ ಈ ಭೂಮಂಡಲದಲ್ಲಿ ಅನೇಕ ರಾಜ-ಮಹಾರಾಜರುಗಳಿಂದ ಗೌರವಾದರಗಳಿಗೆ ಪಾತ್ರನಾಗಿ ಅವರಿಂದ ಪಾದಕಮಲಗಳನ್ನು ಪೂಜಿಸಿಕೊಳ್ಳುವ

ವ್ಯಕ್ತಿಯಾಗಿದ್ದರೂ, ಗುರುಗಳ ಪಾದಪದ್ಮಗಳಲ್ಲಿ ಭಕ್ತಿಯನ್ನಿಡದವನ ಮೇರುವ್ಯಕ್ತಿತ್ವವು ವ್ಯರ್ಥವೇ ಸರಿ.

**ಯಶೋ ಮೇ ಗತಂ ದಿಕ್ಷು ದಾನಪ್ರತಾಪಾತ್**

**ಜಗದ್ವಸ್ತು ಸರ್ವಂ ಕರೇ ಯತ್ಪ್ರಸಾದಾತ್ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥6॥**

ದಾನಧರ್ಮಾದಿಗಳನ್ನು ಮಾಡಿ ಜಗತ್ತಿನಾದ್ಯಂತ ಕೀರ್ತಿ–ಯಶಸ್ಸನ್ನು ಸಂಪಾದಿಸಿದ್ದರೂ, ಇಡೀ ಜಗತ್ತನ್ನೇ ಗೆದ್ದು ತನ್ನ ಅಧೀನದಲ್ಲಿಟ್ಟುಕೊಂಡಿದ್ದರೂ ಅಂತಹ ವ್ಯಕ್ತಿಯು ಗುರುವಿನ ಅನುಗ್ರಹಕ್ಕೆ ಪಾತ್ರನಾಗದಿದ್ದರೆ ಅವನ ಪ್ರಭುತ್ವವು ವ್ಯರ್ಥವೇ ಸರಿ. ಅವನು ಮರಣವನ್ನು ಗೆಲ್ಲಲಾರ.

**ನ ಭೋಗೇ ನ ಯೋಗೇ ನ ವಾ ವಾಜಿರಾಜೌ**

**ನ ಕಾಂತಾಮುಖೇ ನೈವ ವಿತ್ತೇಷು ಚಿತ್ತಮ್ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥7॥**

ಲೌಕಿಕ ಸುಖದಲ್ಲಿ ಆಸಕ್ತಿಯನ್ನು ತೊರೆದಿದ್ದರೂ, ಪತ್ನಿಯಲ್ಲಿ ಅನಾಸಕ್ತನಾಗಿ, ಬಂಧುಮಿತ್ರಪುತ್ರಾದಿ ಸಮಸ್ತ ಸಂಬಂಧಗಳನ್ನು ಕಳಚಿಕೊಂಡರೂ, ವಸ್ತು, ವಾಹನ, ಪಶುಗಳಲ್ಲಿ ಮೋಹವನ್ನು ಬಿಟ್ಟಿದ್ದರೂ ಅವನ ಮನಸ್ಸು ಗುರುಗಳ ಚರಣಗಳಲ್ಲಿ ಅಚಲವಾದ ಶ್ರದ್ಧೆಯನ್ನು ಹೊಂದಿರದಿದ್ದರೆ ಅವನ ವಿಷಯವೈರಾಗ್ಯ ವ್ಯರ್ಥವೇ. ಅದರಿಂದ ಅವನು ಮೋಕ್ಷವನ್ನು ಹೊಂದಲಾರ.

**ಅರಣ್ಯೇ ನ ವಾ ಸ್ವಸ್ಯ ಗೇಹೇ ನ ಕಾರ್ಯೇ**

**ನ ದೇಹೇ ಮನೋ ವರ್ತತೇ ಮೇ ತ್ವನರ್ಘ್ಯೇ ।**

**ಮನಶ್ಚೇನ್ನ ಲಗ್ನಂ ಗುರೋರಂಘ್ರಿಪದ್ಮೇ**

**ತತಃ ಕಿಂ ತತಃ ಕಿಂ ತತಃ ಕಿಂ ತತಃ ಕಿಮ್ ॥8॥**

ತನ್ನ ಮನೆಯನ್ನು ತೊರೆದು, ಸಮಸ್ತ ಲೌಕಿಕವ್ಯವಹಾರಗಳನ್ನು ತ್ಯಜಿಸಿ, ಅಮೂಲ್ಯವಾದ ಶರೀರವೇ ಮುಂತಾದವುಗಳಲ್ಲಿ ಅಭಿಮಾನವನ್ನು ಬಿಟ್ಟು, ವಾಸಮಾಡಿದ ಅರಣ್ಯದ ವಿಷಯದಲ್ಲಿಯೂ ತಾತ್ಸಾರ ಬುದ್ಧಿಯನ್ನು ಹೊಂದಿದ್ದರೂ, ಗುರುಗಳ ಚರಣಗಳಿಗೆ ಶರಣಾಗತನಾಗದಿದ್ದರೆ ಆತ ಸಂಸಾರಬಂಧನದಿಂದ ಮುಕ್ತನಾಗಲು ಸಾಧ್ಯವಿಲ್ಲ.

**ಗುರೋರಷ್ಟಕಂ ಯಃ ಪಠೇತ್ಪುಣ್ಯದೇಹೀ**
**ಯತಿರ್ಭೂಪತಿರ್ಬ್ರಹ್ಮಚಾರೀ ಚ ಗೇಹೀ ।**
**ಲಭೇದ್ವಾಂಛಿತಾರ್ಥಂ ಪದಂ ಬ್ರಹ್ಮಸಂಜ್ಞಂ**
**ಗುರೋರುಕ್ತವಾಕ್ಯೇ ಮನೋ ಯಸ್ಯ ಲಗ್ನಮ್ ॥9॥**

ಯಾವ ಪುಣ್ಯವಂತನು ಭಕ್ತಿಶ್ರದ್ಧೆಯಿಂದ ಸದ್ಗುರುವಿನ ಉಪದೇಶದಲ್ಲಿ ಸದಾ ಮನಸ್ಸನ್ನಿಟ್ಟು ಈ ಗುರ್ವಷ್ಟಕವನ್ನು ಪಠಿಸಿತ್ತಾನೋ ಅವನು ಯತಿಯಾಗಲಿ, ಮಹಾರಾಜನಾಗಲಿ ಇಲ್ಲವೇ ಬ್ರಹ್ಮಚಾರಿ ಅಥವಾ ಗೃಹಸ್ಥನಾಗಲಿ ಅಂತಹ ವ್ಯಕ್ತಿಯು ಸಕಲ ಇಷ್ಟಾರ್ಥಗಳನ್ನೂ ಪಡೆಯುವುದರೊಂದಿಗೆ, ಮೋಕ್ಷವನ್ನು ಹೊಂದುತ್ತಾನೆ.

**********

## ॥ ನಿರ್ವಾಣಷಟ್ಕಮ್ ॥

**ಮನೋಬುದ್ಧ್ಯಹಂಕಾರಚಿತ್ತಾನಿ ನಾಹಂ**
**ನ ಕರ್ಣೌ ನ ಜಿಹ್ವಾ ನ ಚ ಘ್ರಾಣನೇತ್ರೇ ।**
**ನ ಚ ವ್ಯೋಮ ಭೂಮಿರ್ನ ತೇಜೋ ನ ವಾಯುಃ**
**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥1॥**

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಇವಾವುವೂ ನಾನಲ್ಲ. ಕಿವಿ, ಕಣ್ಣು ಮುಂತಾದ ಪಂಚೇಂದ್ರಿಯಗಳೂ ನಾನಲ್ಲ. ಆಕಾಶ, ಭೂಮಿ, ಅಗ್ನಿ, ವಾಯು ಮುಂತಾದ ಪಂಚಭೂತಗಳೂ ನಾನಲ್ಲ. ಆನಂದಸ್ವರೂಪನಾದ ಸದಾಶಿವನೇ ನಾನಾಗಿದ್ದೇನೆ.

**ನ ಚ ಪ್ರಾಣಸಂಜ್ಞೋ ನ ವೈ ಪ್ರಾಣವಾಯುಃ**
**ನ ವಾ ಸಪ್ತಧಾತುರ್ನ ವಾ ಪಂಚಕೋಶಃ ।**
**ನ ವಾಕ್ಪಾಣಿಪಾದೌ ನ ಚೋಪಸ್ಥಪಾಯೂ**
**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥2॥**

ಪ್ರಾಣವೆಂಬ ಹೆಸರಿನವನು ನಾನಲ್ಲ. ಪ್ರಾಣ, ಅಪಾನ ವ್ಯಾನ, ಉದಾನ,

ಸಮಾನ ಈ ಪಂಚಪ್ರಾಣವಾಯುವೂ ನಾನಲ್ಲ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಮುಂತಾದ ಪಂಚಕೋಶಗಳೂ ನಾನಲ್ಲ. ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜಾ, ನರ, ಎಲುಬುಗಳೆಂಬ ಸಪ್ತಧಾತುಗಳೂ ನಾನಲ್ಲ. ವಾಗಿಂದ್ರಿಯ, ಕೈ, ಕಾಲು ಮುಂತಾದ ಕರ್ಮೇಂದ್ರಿಯಗಳೂ, ವಿಸರ್ಜನಾಂಗಗಳೂ ನಾನಲ್ಲ. ಚಿದಾನಂದಸ್ವರೂಪನಾದ ಸದಾಶಿವನೇ ನಾನಾಗಿದ್ದೇನೆ.

**ನ ಮೇ ದ್ವೇಷರಾಗೌ ನ ಮೇ ಲೋಭಮೋಹೌ**

**ಮದೋ ನೈವ ಮೇ ನೈವ ಮಾತ್ಸರ್ಯಭಾವಃ ।**

**ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷಃ**

**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥3॥**

ನನಗೆ ರಾಗದ್ವೇಷಗಳಾಗಲಿ, ಲೋಭ–ಮೋಹಗಳಾಗಲಿ, ಗರ್ವವಾಗಲಿ, ಹಗೆತನವಾಗಲಿ ಇಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳೂ ನನಗಿಲ್ಲ. ಚಿನ್ಮಾತ್ರಸ್ವರೂಪನಾದ ಸದಾಶಿವನೇ ನಾನು.

**ನ ಪುಣ್ಯಂ ನ ಪಾಪಂ ನ ಸೌಖ್ಯಂ ನ ದುಃಖಂ**

**ನ ಮಂತ್ರೋ ನ ತೀರ್ಥಂ ನ ವೇದಾ ನ ಯಜ್ಞಾಃ ।**

**ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ**

**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥4॥**

ಪುಣ್ಯ–ಪಾಪಗಳೂ, ಸುಖ–ದುಃಖಗಳೂ, ಮಂತ್ರ–ತೀರ್ಥಗಳೂ, ವೇದ–ಯಜ್ಞಗಳೂ ನಾನಲ್ಲ. ಭೋಜನವೂ, ಭೋಜನದ ಪದಾರ್ಥಗಳೂ, ಭೋಜನ ಮಾಡುವವನೂ ನಾನಲ್ಲ. ಚಿತ್‌ಸ್ವರೂಪನಾದ ಸದಾಶಿವನೇ ನಾನು.

**ನ ಮೃತ್ಯುರ್ನ ಶಂಕಾ ನ ಮೇ ಜಾತಿಭೇದಃ**

**ಪಿತಾ ನೈವ ಮೇ ನೈವ ಮಾತಾ ನ ಜನ್ಮ ।**

**ನ ಬಂಧುರ್ನ ಮಿತ್ರಂ ಗುರುರ್ನೈವ ಶಿಷ್ಯಃ**

**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥5॥**

ನನಗೆ ಮರಣವಾಗಲಿ, ಸಂಶಯವಾಗಲಿ ಇಲ್ಲ. ಜಾತಿಭೇದವೂ ಇಲ್ಲ. ತಂದೆ–ತಾಯಿಯರೂ, ಬಂಧು–ಮಿತ್ರರೂ ಇಲ್ಲ. ಜನ್ಮವೂ ಇಲ್ಲ. ಗುರು–ಶಿಷ್ಯರೂ ಇಲ್ಲ. ಅಮರನೂ ಜ್ಞಾನಸ್ವರೂಪನೂ ಆದ ಪರಮಾತ್ಮನೇ ನಾನು.

**ಅಹಂ ನಿರ್ವಿಕಲ್ಪೋ ನಿರಾಕಾರರೂಪೋ**
**ವಿಭುತ್ವಾಚ್ಚ ಸರ್ವತ್ರ ಸರ್ವೇಂದ್ರಿಯಾಣಾಮ್ ।**
**ನ ಚಾಸಂಗತಂ ನೈವ ಮುಕ್ತಿರ್ನ ಬಂಧಃ**
**ಚಿದಾನಂದರೂಪಃ ಶಿವೋಽಹಂ ಶಿವೋಽಹಮ್ ॥6॥**

ನಾನು ನಾನಾವಿಕಲ್ಪಗಳಿಲ್ಲದವನು. ನಿರಾಕಾರನೂ ಎಲ್ಲಕಡೆ ಇರುವವನೂ ನಾಗಿದ್ದೇನೆ. ಎಲ್ಲ ಇಂದ್ರಿಯಗಳೊಡನೆ ಸಂಗತನೂ ನಾನಾಗಿದ್ದೇನೆ. ನನಗೆ ಬಂಧವೂ ಇಲ್ಲ. ಮುಕ್ತಿಯೂ ಇಲ್ಲ. ಕೇವಲ ಆನಂದಸ್ವರೂಪನಾದ ಸದಾಶಿವನೇ ನಾನು.

**********

## ॥ ದಶಶ್ಲೋಕೀ ॥

**ನ ಭೂಮಿರ್ನ ತೋಯಂ ನ ತೇಜೋ ನ ವಾಯುಃ**
**ನ ಖಂ ನೇಂದ್ರಿಯಂ ವಾ ನ ತೇಷಾಂ ಸಮೂಹಃ ।**
**ಅನೈಕಾಂತಿಕತ್ವಾತ್ ಸುಷುಪ್ತ್ಯೇಕಸಿದ್ಧಃ**
**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥1॥**

ಭೂಮಿ, ನೀರು, ಅಗ್ನಿ, ಗಾಳಿ, ಆಕಾಶಗಳು ನಾನಲ್ಲ. ಅವುಗಳಿಂದಾದ ಶರೀರವಾಗಲಿ, ಇಂದ್ರಿಯಗಳಾಗಲಿ, ಅವುಗಳ ಸಮೂಹವಾಗಲಿ ನಾನಲ್ಲ. ಅವು ವ್ಯವಸ್ಥಿತವಾಗಿ ಯಾವಾಗಲೂ ಒಂದೇ ರೂಪದಲ್ಲಿ ತೋರುವುದಿಲ್ಲ. ಅವುಗಳೆಲ್ಲ ನಾಶವಾಗುವಂಥವು. ಗಾಢವಾದ ನಿದ್ರೆಯಲ್ಲಿ ಅನುಭವಕ್ಕೆ ಬರುವ ಸದಾ ಒಂದೇ ಆಗಿರುವ ಸ್ವರೂಪ ನನ್ನದು. ಅದೇ ಮಂಗಳಮಯವಾದ ಶಿವಸ್ವರೂಪ. ಆ ಶಿವಸ್ವರೂಪನೇ ನಾನು.

**ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾ**
**ನ ಮೇ ಧಾರಣಾಧ್ಯಾನಯೋಗಾದಯೋಽಪಿ ।**
**ಅನಾತ್ಮಾಶ್ರಯಾಹಂ ಮಮಾಧ್ಯಾಸಹಾನಾತ್**
**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥2॥**

ಸದಾ ಚೈತನ್ಯಸ್ವರೂಪನಾದ ನನಗೆ ಬ್ರಹ್ಮಕ್ಷತ್ರಾದಿ ವರ್ಣಗಳಿಲ್ಲ. ಬ್ರಹ್ಮಚರ್ಯವೇ ಮೊದಲಾದ ಆಶ್ರಮದ ಕಟ್ಟುಪಾಡುಗಳಿಲ್ಲ. ಧಾರಣ, ಧ್ಯಾನ, ಯೋಗ

ಮುಂತಾದವೂ ನನಗಿಲ್ಲ. ಈ ದೇಹವು ಅನಾತ್ಮವಾಗಿದೆ. ನಾನು, ನನ್ನ ಎಂಬೀ ಭಾವನೆಗಳೆಲ್ಲ ಈ ಅನಾತ್ಮವಾದ ದೇಹವನ್ನೇ ಅವಲಂಬಿಸಿವೆ. ಇಂತಹ ಅಧ್ಯಾಸವಿಲ್ಲದ ನಾನು ಸದಾ ಪರಿಶುದ್ಧಸ್ವರೂಪನಾದ ಶಿವನಾಗಿದ್ದೇನೆ.

**ನ ಮಾತಾ ಪಿತಾ ವಾ ನ ದೇವಾ ನ ಲೋಕಾ**

**ನ ವೇದಾ ನ ಯಜ್ಞಾ ನ ತೀರ್ಥಂ ಬ್ರುವಂತಿ ।**

**ಸುಷುಪ್ತೌ ನಿರಸ್ತಾತಿಶೂನ್ಯಾತ್ಮಕತ್ವಾತ್**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥3॥**

ಶುದ್ಧಚೈತನ್ಯಸ್ವರೂಪನಾದ ಆತ್ಮನಿಗೆ ತಾಯಿ, ತಂದೆ, ಮುಂತಾದ ಸಂಬಂಧಗಳಾಗಲಿ, ದೇವರು, ಲೋಕಗಳು, ವೇದಗಳು, ಯಜ್ಞಗಳು, ತೀರ್ಥಗಳಾಗಲಿ ಇರುವುದಿಲ್ಲ. ಪಾಪಪುಣ್ಯಗಳ ನಂಟೂ ಇಲ್ಲ. ಇವೆಲ್ಲ ಶರೀರಕ್ಕೆ ಸಂಬಂಧಿಸಿದ್ದು. ದೇಹಾಭಿಮಾನವಿದ್ದಾಗ ಮಾತ್ರ ಇವೆಲ್ಲ ಇರುತ್ತವೆ. ಗಾಢನಿದ್ರೆಯಲ್ಲಿ ಎಲ್ಲ ಸಂಬಂಧಗಳಿಂದ ದೂರನಾಗಿರುವನು. ಆಗ ಪಾಪಪುಣ್ಯಗಳ ಬಂಧನ-ವಿರುವುದಿಲ್ಲ. ಹೀಗೆ ಯಾವ ಸಂಬಂಧಗಳೂ ಇಲ್ಲದ ಸ್ವಸ್ವರೂಪನಾಗಿ ಬೆಳಗುತ್ತಿರುವ ಶಿವನು ನಾನಾಗಿದ್ದೇನೆ.

**ನ ಸಾಂಖ್ಯಂ ನ ಶೈವಂ ನ ತತ್ಪಾಂಚರಾತ್ರಂ**

**ನ ಜೈನಂ ನ ಮೀಮಾಂಸಕಾದೇರ್ಮತಂ ವಾ ।**

**ವಿಶಿಷ್ಟಾನುಭೂತ್ಯಾ ವಿಶುದ್ಧಾತ್ಮಕತ್ವಾತ್**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥4॥**

ಸಾಂಖ್ಯ, ಶೈವ, ಪಾಂಚರಾತ್ರ, ಜೈನ, ಮೀಮಾಂಸಕರೇ ಮುಂತಾದ ಮತದವರು ಆತ್ಮಸ್ವರೂಪವನ್ನು ವಿವರಿಸುತ್ತಾರೆ. ಆ ರೂಪದ ಆತ್ಮನು ನಾನಲ್ಲ. ನನ್ನದು ಶುದ್ಧ ಚೈತನ್ಯಸ್ವರೂಪ. ಎಲ್ಲವನ್ನೂ ಮೀರಿದ ಸರ್ವಾತ್ಮಕವಾದ ಅಖಂಡಶಿವಸ್ವರೂಪ ನನ್ನದು. ಆ ಶಿವನೇ ನಾನು.

**ನ ಚೋರ್ಧ್ವಂ ನ ಚಾಧೋ ನ ಚಾಂತರ್ನ ಬಾಹ್ಯಂ**

**ನ ಮಧ್ಯಂ ನ ತಿರ್ಯಙ್ ನ ಪೂರ್ವಾಪರಾ ದಿಕ್ ।**

**ವಿಯದ್ವ್ಯಾಪಕತ್ವಾದಖಂಡೈಕರೂಪಃ**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥5॥**

ಆತ್ಮವಸ್ತುವಿಗೆ ಯಾವ ಪರಿಚ್ಛೇದವೂ ಇಲ್ಲ. ಅದು ನಿರ್ವಿಶೇಷವಾದ ಪರಬ್ರಹ್ಮವಸ್ತುವೆನಿಸಿದೆ. ಅದಕ್ಕೆ ಮೇಲೆ-ಕೆಳಗೆ-ಒಳಗೆ-ಹೊರಗೆ-ನಡುವೆ ಅಡ್ಡ ಎಂಬುದೆಲ್ಲ ಇಲ್ಲ. ಪೂರ್ವಾದಿ ದಿಕ್ಕುಗಳಾಗಲಿ ಇಲ್ಲ. ಅದು ಆಕಾಶವನ್ನೂ ವ್ಯಾಪಿಸಿದೆ.

ಅದು ವಿಭಾಗ ಮಾಡಲಾಗದ ಅಖಂಡವಾದ ಒಂದೇ ರೂಪವಾಗಿದೆ. ಅಂತಹ ಶಿವಸ್ವರೂಪವೇ ನಾನು.

**ನ ಶುಕ್ಲಂ ನ ಕೃಷ್ಣಂ ನ ರಕ್ತಂ ನ ಪೀತಂ**

**ನ ಕುಬ್ಜಂ ನ ಪೀನಂ ನ ಹ್ರಸ್ವಂ ನ ದೀರ್ಘಮ್ ।**

**ಅರೂಪಂ ತಥಾ ಜ್ಯೋತಿರಾಕಾರಕತ್ವಾತ್**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥6॥**

ಬ್ರಹ್ಮವಸ್ತುವು ಸ್ವಯಂಪ್ರಕಾಶಮಾನವಾದುದು. ಅದು ಯಾವ ಆಕಾರ ಅಳತೆಯನ್ನೂ ಹೊಂದಿಲ್ಲ. ಅದಕ್ಕೆ ಬಿಳಿ, ಕಪ್ಪು, ಕೆಂಪು ಹಳದಿ ಇತ್ಯಾದಿ ಯಾವ ಬಣ್ಣವೂ ಇಲ್ಲ. ಸಣ್ಣ, ದೊಡ್ಡ, ಗಿಡ್ಡ ಉದ್ದ ಯಾವ ರೂಪವೂ ಇಲ್ಲ. ಅದು ಕೇವಲ ಜ್ಞಾನಜ್ಯೋತಿಯ ಆಕಾರವುಳ್ಳದ್ದಾಗಿದೆ. ಅಂತಹ ಜ್ಞಾನಜ್ಯೋತಿಸ್ವರೂಪನೇ ನಾನು.

**ನ ಶಾಸ್ತಾ ನ ಶಾಸ್ತ್ರಂ ನ ಶಿಷ್ಯೋ ನ ಶಿಕ್ಷಾ**

**ನ ಚ ತ್ವಂ ನ ಚಾಹಂ ನ ಚಾಯಂ ಪ್ರಪಂಚಃ ।**

**ಸ್ವರೂಪಾವಬೋಧೋ ವಿಕಲ್ಪಾಸಹಿಷ್ಣುಃ**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥7॥**

ಜ್ಞಾನಸ್ವರೂಪನೇ ತಾನಾಗಿರುವುದರಿಂದ ಆತ್ಮನಿಗೆ ಗುರುವಿಲ್ಲ. ಶಿಷ್ಯನಿಲ್ಲ. ಶಾಸ್ತ್ರವಿಲ್ಲ. ಶಿಕ್ಷಣವಿಲ್ಲ. ನೀನು ನಾನು ಎಂಬ ಭೇದವಿಲ್ಲ. ತೋರುವ ಈ ಪ್ರಪಂಚವೂ ಇಲ್ಲ. ಯಾವ ವಿಕಲ್ಪವನ್ನೂ ಸಹಿಸದ ಪರಮಚೈತನ್ಯವೇ ನಾನಾಗಿರುವೆ. ಎಂದೆಂದೂ ಒಂದೇ ಆದ ಕೇವಲ ಇರುವಿಕೆಯಿಂದ ಮಾತ್ರ ಸಿದ್ಧವಾಗಿರುವ ಶಿವನು ನಾನು. ಅದೇ ನಮ್ಮೆಲ್ಲರ ಆತ್ಮವಾಗಿದೆ.

**ನ ಜಾಗ್ರನ್ನ ಮೇ ಸ್ವಪ್ನಕೋ ವಾ ಸುಷುಪ್ತಿಃ**

**ನ ವಿಶ್ವೋ ನ ವಾ ತೈಜಸಃ ಪ್ರಾಜ್ಞಕೋ ವಾ ।**

**ಅವಿದ್ಯಾತ್ಮಕತ್ವಾತ್ ತ್ರಯಾಣಾಂ ತುರೀಯಃ**

**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥8॥**

ಆತ್ಮನಿಗೆ ಪಾರಮಾರ್ಥಿಕವಾಗಿ ಯಾವ ಅವಸ್ಥೆಯೂ ಇಲ್ಲ. ಆತ್ಮನು ಎಚ್ಚರ–ಕನಸು ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳುಳ್ಳವನೆಂದು ಅವಿದ್ಯೆಯಿಂದ ತೋರುತ್ತಿರುತ್ತದೆ. ಆಯಾ ಅವಸ್ಥೆಯ ಕಾಲದಲ್ಲಿ ಆತ್ಮನನ್ನು, ವೈಶ್ವಾನರ, ಹಿರಣ್ಯಗರ್ಭ, ಪ್ರಾಜ್ಞ ಎಂಬ ಹೆಸರಿನಿಂದ ಕರೆಯುತ್ತೇವೆ ಅಷ್ಟೆ. ಈ ಎಲ್ಲ ಅವಸ್ಥೆಗಳೂ ಅವಿದ್ಯಾತ್ಮಕವಾಗಿರುತ್ತವೆ. ಈ ಎಲ್ಲ ಅವಸ್ಥೆಗಳನ್ನೂ ಮೀರಿದ ನಾಲ್ಕನೆಯವನು ನಾನು

(ಅವಸ್ಥಾತ್ರಯ ವಿನಿರ್ಮುಕ್ತನು). ಎಲ್ಲ ಕಾಲದಲ್ಲಿಯೂ ಒಂದೇ ಆಗಿ ಉಳಿಯುವ ಕೇವಲ ಶಿವಸ್ವರೂಪನು ನಾನು.

**ಅಪಿ ವ್ಯಾಪಕತ್ವಾತ್ ಹಿತತ್ತ್ವಪ್ರಯೋಗಾತ್**
**ಸ್ವತಃ ಸಿದ್ಧಭಾವಾದನನ್ಯಾಶ್ರಯತ್ವಾತ್ ।**
**ಜಗತ್ತುಚ್ಛಮೇತತ್ ಸಮಸ್ತಂ ತದನ್ಯತ್**
**ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥9॥**

ಪರಬ್ರಹ್ಮವು ಎಲ್ಲವನ್ನೂ ವ್ಯಾಪಿಸಿಕೊಂಡಿದೆ. ಅದು ಸಮಸ್ತಪ್ರಾಣಿಗಳಿಗೆ ಪರಮಪ್ರಿಯವಾದುದೆನಿಸಿದೆ. ಅದು ಸ್ವತಃಸಿದ್ಧಸ್ವರೂಪವಾದ್ದರಿಂದ ಅದಕ್ಕೆ ಬೇರೊಂದರ ಆಶ್ರಯವಿಲ್ಲ. ಸಮಸ್ತಕ್ಕೂ ಅದೇ ಆಧಾರ. ಅದಕ್ಕೆ ಹೊರತಾದ ಸಮಸ್ತ ಪ್ರಪಂಚವೂ ನಾಶವನ್ನು ಹೊಂದುವಂಥದ್ದಾಗಿದೆ. ಅಥವಾ ಹುಸಿ ತೋರಿಕೆಯಾಗಿದೆ. ಅಂತಹ ನಾಶರಹಿತವಾದ ಪರಬ್ರಹ್ಮವಸ್ತುವೇ ನಾನು.

**ನ ಚೈಕಂ ತದನ್ಯತ್ ದ್ವಿತೀಯಂ ಕುತಸ್ಸ್ಯಾತ್**
**ನ ವಾ ಕೇವಲತ್ವಂ ನ ಚಾಕೇವಲತ್ವಮ್ ।**
**ನ ಶೂನ್ಯಂ ನ ಚಾಶೂನ್ಯಮದ್ವೈತಕತ್ವಾತ್**
**ಕಥಂ ಸರ್ವವೇದಾಂತಸಿದ್ಧಂ ಬ್ರವೀಮಿ ॥10॥**

ಆತ್ಮವಸ್ತುವನ್ನು ಒಂದು ಎನ್ನುವಂತಿಲ್ಲ. ಏಕೆಂದರೆ ಇದನ್ನು ಬಿಟ್ಟು ಎರಡನೆಯದಾದದ್ದು ಯಾವುದೂ ಇಲ್ಲ. ತನ್ನೊಳಗೆ ಯಾವ ಭೇದವೂ ಇಲ್ಲದ ಸ್ವರೂಪವಾದ್ದರಿಂದ ಏಕತ್ವವೂ, ಅನೇಕತ್ವವೂ ಇಲ್ಲ. ಅದು ಅದ್ವೈತವಾಗಿರುವುದರಿಂದ ಶೂನ್ಯವೂ ಅಲ್ಲ. ಅಶೂನ್ಯವೂ ಅಲ್ಲ. ಹೀಗೆ ಸಕಲ ಉಪನಿಷತ್ಪ್ರಮಾಣಗಳಿಂದ ಸಿದ್ಧವಾಗಿರುವ ಆತ್ಮತತ್ತ್ವವನ್ನು ಏನೆಂದು ಬಣ್ಣಿಸಲಿ? ಅದು ಅದ್ವಿತೀಯವಾದ ತತ್ತ್ವವಾಗಿದೆ. ಮನೋವಾಕ್ ಪ್ರಪಂಚವನ್ನು ಮೀರಿರುವ ಸ್ವರೂಪವುಳ್ಳದ್ದಾಗಿದೆ.

********